ಸೃಜನಿ
SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 111-115
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳಲ್ಲಿ ಭಕ್ತಿ

ನಾಗರಾಜ ಎಸ್[1] ಮತ್ತು ಡಾ. ಭೀಮಾಶಂಕರ ಜೋಷಿ[2]
ಸಂಶೋಧನಾ ವಿದ್ಯಾರ್ಥಿ, ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ., ದಾವಣಗೆರೆ.

Abstract:

ಭಾರತ ದೇಶವು ಅಥಿತಿ ದೇವೋಭವ ಎಂದು ಸಾರಿ ಹೇಳಿರುವುದು ಕಾಣಬಹುದು. ಅಥಿತಿಗಳನ್ನೇ ದೇವರನ್ನಾಗಿ ಮಾಡಿಕೊಂಡು ಭಕ್ತಿಯಿಂದ ಬೆಳೆದ ರಾಷ್ಟ್ರವಾಗಿದೆ. ಸಂಸ್ಕಾರ, ಸಂಸ್ಕೃತಿ ಮತ್ತು ಸಾಹಿತ್ಯ ಇವುಗಳಿಗೆ ಶ್ರೇಷ್ಟವಾದದು. ಈಡೀ ವಿಶ್ವಕ್ಕೆ ದಾರಿ ದೀಪಾವಾಗಿರುವುದು. ಅಂತಹ ವಿಶಾಲವಾದ ಭಾರತ ದೇಶದಲ್ಲಿ ಪ್ರತಿಯೊಬ್ಬರು ಪ್ರತಿಯೊಂದು ಭಾಷೆ ಮತ್ತು ಸಾಹಿತ್ಯದಲ್ಲಿ ಭಕ್ತಿಯ ಪರಂಪರೆಯನ್ನು ಕಾಣಬಹುದು. ಉತ್ತರ ಭಾರತದಲ್ಲಿ ತುಳಸಿದಾಸರು, ಕಬೀರದಾಸರು ಅದೇ ರೀತಿಯಾಗಿ ಕನಕದಾಸರು ಪುರಂದರದಾಸರು ಇಂತಹ ಹಲವಾರು ವ್ಯಕ್ತಿಗಳಿಂದ ಭಕ್ತಿಯನ್ನು ಕಾಣಬಹುದಾಗಿದೆ. ವಚನ ಸಾಹಿತ್ಯದಲ್ಲಿ ಹಲವಾರು ಶರಣರು ಭಕ್ತಿಯನ್ನು ಮೂಲವಾಗಿಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ನಂತರ ದಾಸ ಸಾಹಿತ್ಯದಲ್ಲಿ ಕೀರ್ತನೆಗಳ ಮೂಲಕ ಭಕ್ತಿಯನ್ನು ತಿಳಿಸುವ ಪ್ರಯತ್ನವನ್ನು ದಾಸ ಸಾಹಿತ್ಯದಲ್ಲಿ ಹರಿದಾಸರು ಭಕ್ತಿಯ ಕೀರ್ತನೆ ನೀಡಿದ್ದಾರೆ. ಇವರುಗಳು ಬರೆದಂತಹ ಭಕ್ತಿಯ ಕೀರ್ತನೆಗಳು ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ತನ್ನದೇ ಆದ ಚಾಪನ್ನು ಮೂಡಿಸಿರುವುದು ತಿಳಿಯುತ್ತೇವೆ ಶರಣರು ಮತ್ತು ದಾಸರುಗಳು ತಮ್ಮ ವಚನ ಕೀರ್ತನೆಗಳಿಂದ ಭಕ್ತಿಯನ್ನೇ ಹರಿಸಿ ಸುತ್ತಮುತ್ತಲಿನ ಸಮಾಜವನ್ನು ಸರಿದಾರಿಗೆ ತರುವ ಶ್ರಮಿಸಿದವರು.

Keywords: *ಭಕ್ತಿ ಪರಂಪರೆ, ದಾಸ ಸಾಹಿತ್ಯ, ವಚನ ಸಾಹಿತ್ಯ, ಕೀರ್ತನೆಗಳು, ಹೆಳವನಕಟ್ಟೆ ಗಿರಿಯಮ್ಮ.*

ಪೀಠಿಕೆ

ಭಕ್ತಿ ಪರಂಪರೆ ಎಂಬುದು ಒಬ್ಬ ವ್ಯಕ್ತಿ ಅಥವಾ ಸಮುದಾಯ ಅಥವಾ ಒಂದು ಸಮಾಜಕ್ಕೆ ಸೀಮಿತವಾದುದಲ್ಲ. ಭಕ್ತಿಯ ಲೋಕ ಒಂದು ವಿಶಿಷ್ಟವಾದ ಸಮಾನತೆಯ ಲೋಕವಾಗಿದೆ. ಅಲ್ಲಿ ಗಂಡು–ಹೆಣ್ಣು, ಅರಸು–ಆಳು, ಬಡವ–ಶ್ರೀಮಂತ ಎಂಬ ಯಾವುದೇ ಬೇಧ ಭಾವವಿಲ್ಲ. ಮಧ್ಯಕಾಲೀನ ಭಾರತದಲ್ಲಿ ಸಂಭವಿಸಿದ ಧಾರ್ಮಿಕ ರಾಜಕೀಯ ಅರಾಜಕತೆಯ ಸಂದರ್ಭದಲ್ಲಿ ಭಕ್ತಿ ಪಂಥ ಚಳವಳಿಯ ರೂಪ ಪಡೆಯಿತು. 10ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ಆಳ್ವರು ಅನುಭವಿ ಪರಂಪರೆಯ ಹರಿಕಾರರಾಗಿ ಜನರ ಬದುಕಿನಲ್ಲಿ ಆತ್ಮವಿಶ್ವಾಸದ ಮೂಲಕ ಭಕ್ತಿಯನ್ನು ಸಾರಿದರು. ನಂತರ ಭಕ್ತಿ ಚಳವಳಿಯು ಕರ್ನಾಟಕದ ವಿಭಿನ್ನ ಕಾಲಘಟ್ಟಗಳಲ್ಲಿ ಕಾಣಿಸಿಕೊಂಡಿತು ಅಂತಹ ಸಂದರ್ಭದಲ್ಲಿ ಶರಣರು ದಾಸರು ಭಕ್ತಿ ಚಳವಳಿಯಲ್ಲಿ ತಮ್ಮನಷ್ಟೇ ತೊಡಗಿಸಿಕೊಳ್ಳದೆ ಅದನ್ನು ಸಮುದಾಯಕ್ಕೆ ತೆರೆದಿಟ್ಟಿದ್ದಾರೆ. ಅದಕ್ಕಾಗಿ 12–13ನೇ

Please cite this article as: ನಾಗರಾಜ ಎಸ್ ಮತ್ತು ಭೀಮಾಶಂಕರ ಜೋಷಿ. (2024). ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳಲ್ಲಿ ಭಕ್ತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 111–115

ಶತಮಾನವನ್ನು ಭಕ್ತಿ ಉನ್ನತಿಗೇರಿದ ಕಾಲವೆಂದು ಹೇಳಬಹುದು.

ಭಕ್ತಿ ಪದದ ಅರ್ಥ

ಭಕ್ತಿ ಪಂಥಕ್ಕೆ ಮೂಲ ನೆಲೆಯನ್ನು ಹುಡುಕಲು ಹೊರಟಂತೆ ಭಯದಿಂದ ಭಕ್ತಿ ಹುಟ್ಟಿತೆ ಎಂಬ ಅಭಿಪ್ರಾಯವನ್ನು ನಾವು ಗಮನಿಸಬೇಕಾಗುತ್ತದೆ. ಭಗವಂತನ ಗುಣಶಕ್ತಿ ಅವನ ಆರಾಧನೆ ಯಾವುದೇ ಬಗೆಯಲ್ಲಿ ಮಾಡುವುದು ಭಕ್ತಿ ಎನಿಸಿಕೊಳ್ಳುತ್ತದೆ. **'ಭಕ್ತಿ'** ಎಂಬ ಪದವು ಸಂಸ್ಕೃತದ **'ಭಜ್'** ಎಂಬ ಪದದಿಂದ ಬಂದಿದೆ. ಭಜ್ ಅಂದರೆ ಸೇವೆ, ಆರಾಧನೆ, ಆಶ್ರಯಿಸು, ಪೂಜಿಸು, ವಂದನೆ ಮತ್ತು ನಿಷ್ಠೆ ಇತ್ಯಾದಿಗಳನ್ನು ಭಕ್ತಿ ಒಳಗೊಂಡಿರುತ್ತದೆ. ಭಕ್ತನ ಬೆಳೆಯುತ್ತಾ ಭಕ್ತಿಯ ಪದಗಳನ್ನು ಕಂಡುಕೊಳ್ಳುತ್ತಾನೆ. ಭಕ್ತನಾದವನು ಭಗವಂತನಲ್ಲಿ ಇಟ್ಟುಕೊಂಡಿರುವ ನಿರ್ಮಲ ಪ್ರೇಮವೆ ಭಕ್ತಿ.

ದೇವರಿಗೆ ಸಂಬಂಧಿಸಿದ ಸ್ವಾರ್ಥರಹಿತ ಪರಿಪೂರ್ಣ ಅರ್ಪಣೆಯ, ಅಪರಿಮಿತ ಪ್ರೇಮಾ ಇತ್ಯಾದಿಗಳು ಭಕ್ತಿಯ ಮುಖ್ಯ ಲಕ್ಷಣಗಳು. ಭಕ್ತಿಯಲ್ಲಿ ವ್ಯಕ್ತಿ ಮತ್ತು ದೈವದ ನಡುವೆ ಒಂದು ಬಗೆಯ ವಿಶಿಷ್ಟವಾದ ವಿಶ್ವಾಸವಿರುತ್ತದೆ, ಮಮತೆ ತುಂಬಿ ಹರಿಯುತ್ತದೆ, ಭಕ್ತ ದೇವರಲ್ಲಿ ಲೀನವಾಗಿರುತ್ತಾನೆ, ತನ್ಮಯನಾಗಿರುತ್ತಾನೆ. ತ್ಯಾಗವೇ ಭಕ್ತಿಯ ಮತ್ತೊಂದು ಲಕ್ಷಣ ಭಕ್ತಿಯ ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆ ಪಾವಿತ್ರ್ಯ, ನಂಬಿಕೆ, ಉತ್ಸಹ ಮತ್ತು ಸಂಭ್ರಮ ಎದ್ದು ಕಾಣುತ್ತದೆ.[3] ಭಕ್ತಿಯ ಇತಿಹಾಸ ಬಹಳ ದೊಡ್ಡದು ಭಗವದ್ಗೀತೆಯಲ್ಲಿ ಅದನ್ನು ಜ್ಞಾನ ಕರ್ಮಗಳಂತೆಯೇ ಒಂದು ಯೋಗವೆಂದು ಪರಿಗಣಿಸಲಾಗಿದೆ.

ಗುರು ಬ್ರಹ್ಮ ಗುರು ವಿಷ್ಣು, ಗುರು ದೇವೋ ಮಹೇಶ್ವರ ।

ಗುರು ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀ ಗುರುವೇ ನಮಃ ॥

ಎಂಬ ಸಂಸ್ಕೃತದ ಲೋಕದಲ್ಲಿ ವೇದಗಳ ಕಾಲದಲ್ಲಿಯೇ ಉಲ್ಲೇಖಿಸಿದಂತೆ ಗುರುವಿನ ಬಗ್ಗೆ ಪರಮ ಶ್ರೇಷ್ಠ ಭಕ್ತಿಯನ್ನು ಗುರುತಿಸುವುದಾಗಿದೆ ಅಂದರೆ ಭಕ್ತಿ ಎಂಬುವುದು ಇಂದು ನಿನ್ನೆಯದಲ್ಲಾ ಅದು ಪ್ರಾಚೀನ ಕಾಲದಿಂದಲೇ ಅಂದರೆ ವೇದಗಳ ಕಾಲದಿಂದಲೆ ಬಂದಿರುವುದು ತಿಳಿಯಬಹುದು. ಅಂತಹ ಭಕ್ತಿಯನ್ನು ಸಕಲ ಜೀವಿ ಮತ್ತು ಮನುಷ್ಯರಲ್ಲಿಯು ನಾವು ಗುರುತಿಸ ಬಹುದಾಗಿದೆ. ಹಾಗೆಯೇ **ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ** ಎಂದು ಹೇಳಿದ್ದಾರೆ. ಅಲ್ಲಿಯು ಗುರು–ಶಿಷ್ಯರ ಭಕ್ತಿಯನ್ನು ಗುರುತಿಸಬಹುದಾಗಿದೆ. ಅದೇ ರೀತಿಯಾಗಿ ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆದಂತಹ ಗಿರಿಯಮ್ಮನವರು ಹಲವಾರು ಕೀರ್ತನೆಗಳನ್ನು ಭಕ್ತಿಯಿಂದ ರಚಿಸಿದ್ದಾರೆ.

ಭಕ್ತಿಯನ್ನು ಕುರಿತು ಹಲವಾರು ವಿದ್ವಾಂಸರು ಪಂಡಿತರುಗಳು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಮಧ್ವಾಚಾರ್ಯರು 'ಭಗವಂತನೊಂದಿಗೆ ಜ್ಞಾನಪೂರ್ವಕವಾಗಿ ಸದೃಢ ಮತ್ತು ಸತತವಾಗಿ ಸ್ನೇಹದಿಂದ ಇರುವುದೇ ಭಕ್ತಿ' ಎಂದಿದ್ದಾರೆ. ಇವರು ಹೆಚ್ಚಾಗಿ ಜ್ಞಾನಕ್ಕೆ ಮತ್ತು ಸ್ನೇಹಕ್ಕೆ ಹೆಚ್ಚು ಹೊತ್ತು ಕೊಟ್ಟಿರುವುದನ್ನು ತಿಳಿಯಬಹುದಾಗಿದೆ. ಭಕ್ತಿ ಮತ್ತು ಜ್ಞಾನ ಒಂದು ನಾಣ್ಯದ ಎರಡು ಮುಖಗಳಿದಂತೆ. ನಾರದರ ಭಕ್ತಿ ಸೂತ್ರದ 2 ರಲ್ಲಿ **"ಸಾತ್ವಸ್ಮಿನ್ ಪರಮ ಪ್ರೇಮರೂಪ"** ಎಂಬ ಸಂಸ್ಕೃತದ ಶ್ಲೋಕವನ್ನು ಗಮನಿಸಬಹುದು. 'ಭಕ್ತಿಯು ಪರಮಾತ್ಮನ ಕುರಿತಾದ ಪರಮ ಪ್ರೇಮ ಸ್ವರೂಪದ್ದು.' ನಾರದರು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಭಗವಂತನನ್ನು ಕುರಿತಾದ ನಿಸ್ವಾರ್ಥ ಪ್ರೇಮವೇ ಭಕ್ತಿ' ಎಂದು ಭಾಗವತ ಹೇಳುತ್ತಾನೆ. ಭಗವತರು ಹೇಳುವಂತೆ ನಾನು ನನ್ನದು ಮೇಲು–ಕೀಳುಗಳೆಂಬ ಭೇದ–ಭಾವವಿಲ್ಲದ ಆಸೆ–ಆಕಾಂಕ್ಷೆಗಳನ್ನು ತ್ಯಾಗ ಮಾಡುವುದು ಯಾವ ವಸ್ತುವಿಗೂ ಆಸೆ ಪಡದಿರುವುದು, ನಿಸ್ವಾರ್ಥ ಪ್ರೇಮವೇ ಭಕ್ತಿ ಎಂದು ಭಾಗವತರು ಹೇಳಿದ್ದಾರೆ.

ಭಕ್ತಿಯ ಪರಂಪರೆ

ಭಕ್ತಿ ಪರಂಪರೆಯು ವೇದಗಳ ಕಾಲದಿಂದ ಪ್ರಾರಂಭಿಸಿ ಆಧುನಿಕ ಯುಗದವರೆಗೂ ಈ ಭಕ್ತಿ ಪಂಥವು ಬೆಳೆದು ಬಂದಿದೆ. ಹಾಗೆ ಭಕ್ತಿ ಅಥವಾ ಜ್ಞಾನದ ಸ್ವರೂಪಗಳು ಬೇರೆ ಬೇರೆಯಾಗಿದೆ ದಾಸ ಪರಂಪರೆಯಲ್ಲಿ ಭಕ್ತನು ದೇವರಿಗೆ ದಾಸನಾಗಿದ್ದಾನೆ, ಶೈವ ಪಂತದಲ್ಲಿ ಶರಣನಾಗಿದ್ದಾನೆ, ಅದೇ ರೀತಿ ಭಕ್ತಿ ಮತ್ತು ಆರಾಧನೆಯಲ್ಲಿಯು ಭಿನ್ನಮತವಾದ ರೀತಿಗಳಿವೆ. ಭಕ್ತಿಗೆ ತನ್ನದೇ ಆದಂತಹ ವಿಶಿಷ್ಟವಾದ ಚರಿತ್ರೆ ಇದೆ ಇದು ಪವಾಡದಂತೆ ದಿಡೀರ್ ಎಂದು ಹುಟ್ಟಿದುದಲ್ಲ, ಭಗವಂತನು ಹುಟ್ಟಿದಾಗ ಭಕ್ತ ಹುಟ್ಟಿದ, ಭಕ್ತನಿಂದ ಭಕ್ತಿ ರೂಪಗೊಂಡದ್ದನ್ನು ಶಾಸ್ತ್ರ, ಪುರಾಣ ಮತ್ತು ಸಾಹಿತ್ಯಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಭಕ್ತಿ ಪರಂಪರೆ ಎಂಬುದು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾದದ್ದಲ್ಲ ಅದು ಭಾರತ ದೇಶದ ಎಲ್ಲಾ ರಾಜ್ಯಗಳಲ್ಲೂ ಒಂದಲ್ಲ ಒಂದು ಕಾಲದಲ್ಲಿ ಆರಂಭಗೊಂಡು ಉನ್ನತ ಸ್ಥಿತಿಯನ್ನು ತಲುಪಿರುವುದು ತಿಳಿಯಬಹುದಾಗಿದೆ.

ಚಾರಿತ್ರಿಕವಾಗಿ ಭಕ್ತಿ ಪರಂಪರೆ ಎಂದಿನಿಂದ ಪ್ರಾರಂಭವಾಯಿತು ಎಂದು ತಿಳಿಯುವುದು ಅಗತ್ಯವಾದದು. ಮನುಷ್ಯನಾದವನು ಎಂದಿನಿಂದ ದೇವರು ಎಂಬ ವಸ್ತು ಇದೆ ಎಂದು ನಂಬಿ ಒಪ್ಪಿ ಅವನ ಆರಾಧನೆಯನ್ನು ಮಾಡಲು ಆರಂಭಿಸಿದನು ಅಂದಿನಿಂದಲೆ ಭಕ್ತಿ ಪರಂಪರೆ ಪ್ರಾರಂಭವಾಗಿದೆ ಎನ್ನಬಹುದು. ವಿಷ್ಣು ಭಕ್ತಿ ಪರಂಪರೆಯು ಭಾರತದಲ್ಲಿ ಕ್ರಿ.ಶ 2ನೇ ಶತಮಾನದ ಪೂರ್ವದಿಂದ ಬೆಳೆದು ಬಂದಿತ್ತೆಂಬುದನ್ನು ನಂಬಬೇಕಾಗುತ್ತದೆ. ಹಾಗೆಯೇ ಮಹಾರಾಷ್ಟ್ರದ ನೆರೆಯ ಪ್ರಾಂತ್ಯವಾದ ಗುಜರಾತಿನಲ್ಲಿ ಶ್ರೇಷ್ಟತೆಯನ್ನು ಪ್ರಮುಖವಾಗಿ ಗುರುತಿಸಿಕೊಂಡಿತು. ಕ್ರಿ.ಶ 450 ರ ಹಲ್ಮಿಡಿ ಶಾಸನದಲ್ಲಿ ಪ್ರಾರಂಭದಲ್ಲಿ ವಿಷ್ಣುವಿನ ಸ್ತೋತ್ರ ಮಾಡಲಾಗಿದೆ. ಕ್ರಿ.ಶ 578 ರ ಮಂಗಳೇಶನ ಶಾಸನದಲ್ಲಿ ಬಾದಾಮಿಯಲ್ಲಿ ವೈಷ್ಣವರ ಗುಹೆ ನಿರ್ಮಾಣ ಮಾಡಿಸಿದನ್ನು ಅದಕ್ಕೆ ಪರಮ ಭಾಗವತ ಎಂದು ಕರೆದರು. ಕ್ರಿ.ಶ 700 ರ ಕಪ್ಪೆ ಆರಭಟನ ಶಾಸನದಲ್ಲಿ ವಿಷ್ಣುವಿನ ಸ್ಮರಣೆ ಇದೆ ಈ ಅಂಶಗಳನ್ನು ನೋಡಿದ ಮೇಲೆ ಕ್ರಿ.ಶ 5ನೇ ಶತಮಾನಕ್ಕಿಂತ ಮೊದಲೇ ಭಕ್ತಿ ಚಳುವಳಿ ಇತ್ತೆಂಬುದನ್ನು ತಿಳಿಯಬಹುದಾಗಿದೆ.

ಭಕ್ತಿಯ ವಿಧಗಳು

ಹರಿದಾರು ಭಕ್ತಿಯ ಆಚರಣೆಗೆ ಸಾಧಕನ ಅನುಕೂಲಕ್ಕಾಗಿ ನವವಿಧ ಭಕ್ತಿಯನ್ನು ಸಾರಿ ಹೇಳಿದ್ದಾರೆ. ಮುಕ್ತಿಗೆ ಭಕ್ತಿಯೇ ಮೂಲ. ಅಂತಹ ಪುರಾಣಗಳಲ್ಲಿ ಮೇರು ಕೃತಿಯೆನಿಸಿದ ಶ್ರೀಮದ್ಭಾಗವತವು ನವವಿಧ ಭಕ್ತಿಯನ್ನು ಸೂತ್ರದ ಮೂಲಕ ಉಲ್ಲೇಖಿಸಲಾಗಿದೆ.

"ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ।

ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್"।

ಸಾಧಾರಣವಾಗಿ ಭಕ್ತಿಯ ವಿಧಗಳು 9. ನವವಿಧ ಭಕ್ತಿ ಎಂದು ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವುದು ನಾವು ತಿಳಿಯಬಹುದು. ಅಂತಹ ನವವಿಧ ಭಕ್ತಿಗಳು. ಶ್ರವಣ, ಕೀರ್ತನ, ಸ್ಮರಣ, ಪಾದಸೇವೆ, ಅರ್ಚನಾ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನೆ ಇವುಗಳೇ ಈ ನವವಿಧಗಳನ್ನು ಭಕ್ತಿ ಮಾರ್ಗಗಳಂತೆ ಕರೆದಿರುವುದುಂಟು

ಭಗವಂತನ ವಿಷ್ಣುವಿನ ವಿಚಾರಗಳನ್ನು ಕೇಳುವುದು ಶ್ರವಣಶಕ್ತಿ, ಸ್ತೋತ್ರ ಮಾಡುವುದು ಕೀರ್ತನ ಭಕ್ತಿ, ಶ್ರೀ ಹರಿಯ ಗುಣಶಕ್ತಿಗಳನ್ನು ಜ್ಞಾಪಿಸುವುದು ಸ್ಮರಣ ಶಕ್ತಿ, ಹರಿಯ ಪೂಜೆ ಮಾಡುವುದು ಅರ್ಚನ ಭಕ್ತಿ, ಹರಿಯ ಪಾದ ಸೇವನೆ ಮಾಡುವುದು ಪಾದಸೇವನ ಭಕ್ತಿ, ಹರಿಗೆ ನಮಸ್ಕರಿಸುವುದು ವಂದನ ಭಕ್ತಿ, ದಾಸನೆಂದು ಒಪ್ಪಿಕೊಳ್ಳುವುದು ದಾಸ್ಯ ಭಕ್ತಿ, ಹರಿಯ ಜೊತೆ ಸ್ನೇಹದಿಂದ ವರ್ತಿಸುವುದು ಸ್ನೇಹ ಭಕ್ತಿ, ಹರಿಗೆ ಮನಸ್ಸಿನಲ್ಲಿರುವುದನ್ನೆಲ್ಲ ಸಮರ್ಪಿಸುವುದು ಆತ್ಮ

ನಿವೇದನಾ ಭಕ್ತಿ. ಜಡೆಯ ಜಗದ್ರಕ್ಷಕ ವಿಷ್ಣುವಿನ ನಾಮಗುಣಲೀಲಾ ಕಥನಗಳ ಶ್ರವಣ, ಕೀರ್ತನ, ಹಾಗೂ ಭಗವಂತನ ಸ್ಮರಣೆ, ಪಾದಸೇವನೆ, ಅರ್ಚನೆ, ವಂದನೆ, ದಾಸ್ಯ, ಸಖ್ಯ, ಆತ್ಮನಿವೇದನೆ, ಇವುಗಳೇ ಆ ನವವಿಧ ಭಕ್ತಿ.

ಹೆಳವನಕಟ್ಟಿ ಗಿರಿಯಮ್ಮನವರ ಕೀರ್ತನೆಗಳಲ್ಲಿ ಭಕ್ತಿ

ಹರಿದಾಸ ಭಕ್ತಿಪಂಥವೊಂದು ಕರ್ನಾಟಕದಲ್ಲಿ ಶಿವಶರಣರಂತೆಯೇ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕೆಲಸದಲ್ಲಿ ತೊಡಗಿದಾಗ ಸತ್ತ್ವ ಮತ್ತು ಮೊತ್ತದಲ್ಲಿ ಶಿವಶರಣೆಯರಷ್ಟಲ್ಲದಿದ್ದರೂ ಕೆಲವು ವೈಷ್ಣವ ಭಕ್ತೆಯರು ಕೃತಿ ರಚನೆ ಮಾಡಿರುವುದು ಕಂಡುಬರುತ್ತದೆ. ಗಲಗಲಿ ಅವ್ವ, ಭಾಗಮ್ಮ, ಭೀಮವ್ವ, ಸುಂದರಾಬಾಯಿ, ಹೆಳವನಕಟ್ಟೆ ಗಿರಿಯಮ್ಮ ಇತ್ಯಾದಿ ಹೆಸರುಗಳನ್ನು ಉಲ್ಲೇಖಿಸಬಹುದು. ಅದರಲ್ಲಿ ತುಂಬ ಪ್ರಖ್ಯಾತರಾದವರು ಹೆಳವನಕಟ್ಟೆ ಗಿರಿಯಮ್ಮ ಎಂದೆಳಬಹುದು. ಗಿರಿಯಮ್ಮನ ಆರಾಧ್ಯದೈವವಾದ ಹೆಳವನಕಟ್ಟೆ ಗಿರಿಯಮ್ಮ ಎಂಬ ಅಂಕಿತದಲ್ಲಿ ಗಿರಿಯಮ್ಮನು ಅನೇಕ ಕೀರ್ತನೆಗಳನ್ನು ರಚಿಸಿದ್ದಾಳೆ. ಅವುಗಳನ್ನು ಸಣ್ಣ ಹಾಡುಗಳು ಮತ್ತು ದೊಡ್ಡ ಹಾಡುಗಳೆಂದು ರಚಿಸಿದ್ದಾಳೆ.

ಗಿರಿಯಮ್ಮನು ಸದ್‌ಭಕ್ತ ಗೃಹಿಣಿಯಾಗಿ ಸಂಸಾರದಲ್ಲಿ ವಿರಕ್ತಳಾಗಿ ಭಗವಂತನ ಭಕ್ತಿಯಲ್ಲಿಯೇ ತನ್ನ ಬದುಕನ್ನು ಸವೆಸಿದಳು. ಅಂತಹ ಭಗವಂತನ ಭಕ್ತಿಯ ಸ್ವರೂವನ್ನು ಸರಳವಾಗಿ ಅಷ್ಟೇ ತಾತ್ವಿಕವಾಗಿ ನಿರೂಪಿಸುತ್ತಾಳೆ. ಇಂತಹ ವಿಶೇಷವೆನಿಸುವ ಕೀರ್ತನೆಗಳನ್ನು ನೀಡುವ ಮೂಲಕ ಯಶಸ್ವಿ ಮಹಿಳಾ ಕೀರ್ತನಾಕಾರ್ತಿಯಾಗಿ ಗುರುತಿಸಿಕೊಂಡಿದ್ದಾಳೆ. ಸಾಮಾನ್ಯವಾಗಿ ಭಕ್ತೆಯಾದವಳು ಭಗವಂತನನ್ನು ಪತಿಯೆಂದು ಭಾವಿಸಿ ಮಧುರ ಭಕ್ತಿಯಿಂದ ಆರಾಧಿಸುತ್ತಾಳೆ. ಗಿರಿಯಮ್ಮನಾದ ವಾತ್ಸಲ್ಯ ಭಕ್ತಿ ಇವಳಿಗೆ ದೇವರೆ ಮಗುವಾಗಿದ್ದಾನೆ ಎಂದು ಹೇಳಿದ್ದಾರೆ.

ಪದುಮನಾಭನೆ ನಿನ್ನ ಪಾದ ಕಿಂಕರ ನನ್ನ ಕೈ ಬಿಡು
ವುದುವಿತವೇ ರಂಗ ॥ಪ॥
ಮುದದಿಂದ ನಿನ್ನ ಪಾದಕೆರಗುವೆ ನಾನು ತ್ವರಿ
ತದಿ ನೀ ಕಾಯೋ ಎನ್ನೊಡೆಯ ರಂಗ ॥ಪ॥
ಅಜಗರಶಯನನೆ ಬುಧಜನ ನಮಿತನೆ
ತ್ರಿಜಗವಂದಿತಪಾದ ಪದುಮ[ಜ] ಜನಕನೆ ॥1॥
ಶಿಶುವಾಗಿ ಗೋಕುಲದ ಪಶುಗಳ ಸಲಹಿದೆ
ಶಶಿಭೂಷಣಸಖ ಶಿಶುವ ಕಾಪಾಡೊ ॥2॥
ಸಾಂದೀಪನಿಗೊಲಿದ ಸಂದೇಹವಿಲ್ಲದೆ
ತಂದೆ ಹೆಳವನಕಟ್ಟೆ ರಂಗ ಕೃಪಾಂಕ ॥3॥

ತ್ರಿಭುವ ವೈಭವಿಯಾದ ಪದ್ಮನಾಮನಾದ ರಂಗನಾಥನ ಪಾದಗಳಿಗೆ ವಂದಿಸುತ್ತಾ ಆತನ ಕೃಪೆಯನ್ನು ಇಲ್ಲಿ ವಿವಾರಿಸಿದ್ದಾಳೆ. ವಿಷ್ಣುವಿನ ಅವತಾರಿಯಾದ ರಂಗನನ್ನ ಮನಸ್ಸಿನಲ್ಲಿಯೇ ನೆನೆಯುತ್ತಾ ಪದ್ಮನಾಭನೇ ನಿನ್ನ ಪಾದದ ಸೇವಕಿಯಾದ ನನ್ನನ್ನು ಕೈ ಬಿಡುವುದು ಸರಿಯೇ ರಂಗನಾಥ. ಅತ್ಯಂತ ಮೃದುವಾಗಿ ನಿನ್ನ ಪಾದಕೆರಗುವೆ ನಾನು, ಆದ್ದರಿಂದ ಒಡೆಯ, ಯಾಜಮಾನನಾದ ನೀನು ನನ್ನನ್ನು ಪ್ರತಿನಿತ್ಯವು ಕಾಯೋ ಎಂದು ಹೇಳಿದ್ದಾರೆ.

ಅಜಗರಶಯನ ಎಂದರೆ ಸರ್ಪದ ಮೇಲೆ ಮಲಗಿದಾತ, ಭಕ್ತಜನರಿಂದ ಪುಳಕಿತನಾದ ನಿನ್ನ ಮೂರು ಲೋಕಗಳಿಂದ ಶ್ರೇಷ್ಟವಾದ ನಿನ್ನ ಪಾದವನ್ನು ತೋರು ನನ್ನ ಒಡೆಯ. ಮಗುವಾಗಿ ನೀನು ಗೋಕುಲದಲ್ಲಿದ್ದ ದನಕರು ಹಸುಗಳನ್ನು ಸಲುಹಿದೆ, ಪರಶಿವನೋಲುವ ಭಕ್ತರನ್ನು ಕಾಪಾಡು ಈ ಲೋಕದ ಸಂಪೂರ್ಣವಾದ ಪ್ರಕಾಶನ ಹೊಳಪನ್ನು ಹೊಂದಿ ಹೊಳಪಿಗೆ ನೀ ಒಲಿದೆ ಎಂದು ಕವಿಯಿತ್ರಿ ಚಿತ್ರಿಸಿದ್ದಾಳೆ. ಹೀಗೆ ಪಾದ ಸೇವನಂ ಶ್ರೀ ಹರಿಯ ಚರಣ ಸೇವೆ ಮಾಡುವುದು ಅಥವಾ ಮಾಡುವ ಎಲ್ಲ ಒಳ್ಳೆಯ ಕಾರ್ಯಗಳು ಶ್ರೀಹರಿಯ ಚರಣ ಸೇವೆ ಎಂದು ತಿಳಿಯುವುದು.

ಈತಲಿಂಗ ದೇವ ಶಿವನು
ಆತ ರಂಗಧಾಮ ವಿಷ್ಣು
ಮಾತ ಕೇಳೊ ಮಂಕು ಮನುಜ
ಮನದ ಅಹಂಕಾರ ಬಿಟ್ಟು

ವೇದಕ್ಕೆ ಸಿಕ್ಕಿದನೀತ
ವೇದನಾಲ್ಕು ತಂದನಾತ
ಬೂದಿ ಮೈಯೊಳು ಧರಿಸಿದನೀತ
ಪೋದಗಿರಿಯ ಪೊತ್ತನಾತ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ವೇದಗಳಿಗೆ ಮಹತ್ವದ ಸ್ಥಾನವಿದೆ. ವೇದಗಳಲ್ಲಿ ಪರಶಿವನ ವಿಚಾರಗಳನ್ನು ಗಿರಿಯಮ್ಮನವರು ತಿಳಿಸಿದ್ದಾರೆ. ಹರನು ಸರ್ವವ್ಯಾಪಿಯಾದ ಮಹಾಪುರುಷನು ಆತನು ವೇದಗಳಿಗೆ ಸಿಕ್ಕು ನಾಲ್ಕು ವೇದಗಳನ್ನು ತರುತ್ತಾನೆ, ಆ ನಾಲ್ಕು ವೇದಗಳು ಯಾವುವೆದರೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂದು ತಿಳಿಯಬಹುದು. ಮಸಣದ ಬೂದಿಯನ್ನು ಮೈಯಲ್ಲಿ ಧರಿಸಿದವನು ಕೈಲಾಸ ಗಿರಿಯ ಒಡೆಯನಾಗಿದ್ದಾನೆ.

ಹೀಗೆ ಗಿರಿಯಮ್ಮನವರು ಬರೆದಂತಹ ಬಹುತೇಕ ಕೀರ್ತನೆಗಳು ಅನನ್ಯ ಭಕ್ತಿಯನ್ನು ಒಳಗೊಂಡಿವೆ. ಗಿರಿಯಮ್ಮನವರ ಕೀರ್ತನೆಗಳಲ್ಲಿ ತೋರಬಾರದೆ ನಿಮ್ಮ ಚರಿತೆಯನು ಎನ್ನುವ ಕೀರ್ತನೆಯು ಹೆಳವನಕಟ್ಟೆ ರಂಗನಾಥನನ್ನು ಕುರಿತು ಹೇಳಿದ ಹಾಡು, ಇದು ಹೆಳವನಕಟ್ಟೆ ರಂಗನು ಗಿರಿಯಮ್ಮನ ಅನನ್ಯ ಭಕ್ತಿಗೆ ಒಲಿದ ಕಥೆಯನ್ನು ಹೇಳುತ್ತದೆ. ಇಷ್ಟೇ ಅಲ್ಲದೇ ಗಿರಿಯಮ್ಮನವರು ಹೇಳಿದಂತಹ ಕೀರ್ತನೆಗಳಲ್ಲಿ ಭಕ್ತಿ ಭಾವ ತುಂಬಿ ಹರಿಯುತ್ತಾದೆ. ಒಮ್ಮೆ ಊರಿಗೆ ಬರಗಾಲ ಬಂದಂತಹ ಸಂದರ್ಭದಲ್ಲಿ ಭಕ್ತಿಯಿಂದ ರಂಗನಾಥನಲ್ಲಿ ಮೊರೆಹೋಗಿ ಮಳೆಯನ್ನು ತರಿಸಿದಳು ಎನ್ನುವ ಪವಾಡ ಕಥೆಗಳನ್ನು ಸಹ ನಾವು ನೋಡುತ್ತೇವೆ.

ಆಕರ ಗ್ರಂಥಗಳು

- ಭೀಮಾಚಾರ್ಯ, ಹನುಮಂತವಾರ್ಯ ವಡವಿ. (1927). *ಹೆಳವನಕಟ್ಟೆ ಗಿರಿಯಮ್ಮನ ಚರಿತ್ರೆ.* ವಾಯ್, ಜಿ ಕುಲಕರ್ಣಿ ಆನಂದಮಠ.
- ಇಂದುಬಾಯಿ, ಟಿ.ಕೆ. (1987). *ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು* (ಜನಪ್ರಿಯ ಆವೃತ್ತಿ). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
- ಗೌರಿ ಸಂದರ್. (ಸಂ.). (2013). *ಹರಿದಾಸ ಸಾಹಿತ್ಯ ಮಾನವ ಜನ್ಮ ದೊಡ್ಡದು.* ಸುಂದರ ಪ್ರಕಾಶನ.
- ಕಾಕೋಳು ಸರೋಜಮ್ಮ. (1994). *ಮಹಾಸಾಧ್ವಿ ಹೆಳವನಕಟ್ಟೆ ಗಿರಿಯಮ್ಮ.* ಚಂದ್ರಿಕಾ ಪ್ರಕಾಶನ.
- ಲೀಲಾವತಿ, ಎಸ್. ರಾವ್. (2000). *ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆ.* ಸಂವಹನ.
- ರಾಜಶೇಖರಪ್ಪ, ಬಿ. (2001). *ಇತಿಹಾಸ ಕಥನ.* ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್.
- ಸುಬ್ಬಣ್ಣ ರೈ, ಎ., ಮಾಧವ ಪೆರಾಜೆ., ಸಿ.ವೆಂಕಟೇಶ., ಸುಚೇತಾ ನವರತ್ನ. (ಸಂ.). (2022). *ದಕ್ಷಿಣ ಭಾರತದ ಭಕ್ತಿ ಪರಂಪರೆ ಮತ್ತು ದಾಸಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸ್ವಾಮಿ ಚಿನ್ಮಯಾನಂದ. (2004). *ನಾರದ ಭಕ್ತಿಸೂತ್ರ.* ಸೆಂಟ್ರಲ್ ಚಿನ್ಮಯ ಮಿಷನ್ ಟ್ರಸ್ಟ್.
- ವರದರಾಜ್, ಜಿ. (2015). *ಹರಿದಾಸ ಸಾಹಿತ್ಯಸಾರ.* ಕನ್ನಡ ಸಾಹಿತ್ಯ ಪರಿಷತ್.
- ವೆಂಕಟೇಶ ಮೂರ್ತಿ, ಎಚ್.ಎಸ್. (1975). *ಕೀರ್ತನಕಾರರು.* ಸಪ್ನ ಬುಕ್‌ಹೌಸ್.